

# ಗಳಗೇಶ್ವರನ ಸನ್ನಿಧಾನ





**ವರದಾ ನದಿಯು ತುಂಗಭದ್ರೆಯ ಜತೆ ಸಂಗಮಿಸುವ ಭವ್ಯ ಪರಿಸರದಲ್ಲಿ ಈ ಶಿಲ್ಪವೈಭವ ಸವಿಯಬಹುದು.**

ಚಿತ್ರ–ಲೇಖನ:
**ಎ.ಜಿ. ಲಕ್ಷ್ಮೀನಾರಾಯಣ**

**ಕ**ಲ್ಯಾಣ ಚಾಲುಕ್ಯರು ನಿರ್ಮಾಣ ಮಾಡಿದ ಹಾವೇರಿ ಜಿಲ್ಲೆಯ ಗಳಗನಾಥ–ದಲ್ಲಿರುವ ಗಳಗೇಶ್ವರ ದೇವಾಲಯವು ಅತ್ಯಪರೂಪದ್ದು. ಅದ್ಭುತ ವಿನ್ಯಾಸ–ದಲ್ಲಿ ನಿರ್ಮಾಣಗೊಂಡ ಈ ಶಿವಾಲಯ ಶಿಲ್ಪಸೌಂದರ್ಯಕ್ಕೆ ಹೆಸರಾಗಿದೆ. ಗಳಗನಾಥದ ಮೂಲಕ ಹಾದುಹೋಗುವ ತುಂಗಭದ್ರಾ ನದೀ ತೀರದಲ್ಲಿ ನಿರ್ಮಾಣಗೊಂಡಿದೆ.

ನದಿಯಿಂದ ಉದ್ಭವವಾಗಬಹುದಾದ ಮಹಾಪೂರದಿಂದ ರಕ್ಷಣೆ ಪಡೆಯ–ಲೆಂದೇ ದೇಗುಲವನ್ನು ಈ ರೀತಿಯಲ್ಲಿ ವಿನ್ಯಾಸಗೊಳಿಸಿರಬಹುದು ಎನ್ನುವುದು ತಜ್ಞರ ಅಭಿಪ್ರಾಯ. ಪಲ್ಲುನಿ ಎಂಬುದು ಗಳಗನಾಥದ ಪೂರ್ವ ಹೆಸರಾಗಿದ್ದು ಇಲ್ಲಿ ವರದಾ ನದಿಯು ತುಂಗಭದ್ರೆಯೊಡನೆ ಸಂಗಮಿಸುತ್ತದೆ. ಭವ್ಯ ಪರಿಸರದಲ್ಲಿರುವ ಈ ಶಿವದೇವಾಲಯ ಹನ್ನೊಂದನೇ ಶತಮಾನದ ಕಲ್ಯಾಣ ಚಾಲುಕ್ಯರ ಕಾಲಾವಧಿಯಲ್ಲಿ ನಿರ್ಮಾಣಗೊಂಡಿದ್ದು ಎನ್ನಲಾಗುತ್ತದೆ.

ಚಾಲುಕ್ಯ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಈ ದೇಗುಲ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿ ಪೂರ್ವಾಭಿಮುಖವಾಗಿ ದೆ. ಗರ್ಭಗೃಹದಲ್ಲಿ ಎತ್ತರವಾದ ಶಿವಲಿಂಗ, ಗರ್ಭಗೃಹದ ಬಾಗಿಲು ಆಕರ್ಷಕ. ಹನ್ನೆರಡು ಅಡಿ ಎತ್ತರದ ಇದರಲ್ಲಿ ತ್ರಿಶಾಖ ಪಟ್ಟಿಗಳನ್ನು ಬಿಂಬಿಸಲಾಗಿದೆ.

ಲಲಾಟಬಿಂಬದಲ್ಲಿ ಬಿಡಿ ಶಿಲ್ಪಗಳನ್ನು ಕೆತ್ತಲಾಗಿದ್ದು ಗರ್ಭಗೃಹಕ್ಕೆ ಹೊಂದಿ–ಕೊಂಡಿರುವ ವಿಶಾಲವಾದ ಅಂತರಾಳಕ್ಕೆ ಬೆಳಕಿನ ವ್ಯವಸ್ಥೆಗಾಗಿ ಸುಂದರವಾದ ಜಾಲಾಂಧ್ರಗಳಿವೆ. ಅಂತರಾಳದ ಎರಡೂ ಬದಿಯ ಗೋಡೆಗಳಿಗೆ ಹೊಂದಿಸಿ ಸರಸ್ವತಿ, ನಂದಿ, ಪಂಚಲಿಂಗ ಹಾಗೂ ವಿಷ್ಣುವಿನ ಬಿಡಿ ಶಿಲ್ಪಗಳನ್ನು ಇಡಲಾ–ಗಿದೆ. ಸಾದಾ ಭುವನೇಶ್ವರಿಯೂ ಇದರ ಒಂದು ಭಾಗವಾಗಿದೆ.

ಕಕ್ಷಾಸನವನ್ನು ಒಳಗೊಂಡು ವಿಶಾಲವಾಗಿ ತೆರೆದುಕೊಂಡಿರುವ ನವರಂಗ–ವನ್ನು ಮೂರೂ ಕಡೆಗಳಿಂದ ಪ್ರವೇಶಿಸಬಹುದು. ಈ ನವರಂಗದಲ್ಲಿ ನಾಲ್ಕು